ವಿಷಯ: ಪುರಸಭೆ ಹಾಗೂ ನಗರ ಸಭೆಗಳಿಗೆ ಅನುದಾನ ಬಿಡುಗಡೆ

2574 (3758)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿರುವ ಪುರಸಭೆ ಹಾಗೂ ನಗರಸಭೆಗಳ ಸಂಖ್ಯೆ ಎಷ್ಟು?

(ಆ) ರಾಜ್ಯದ ಎಲ್ಲಾ ಪುರಸಭೆ ಹಾಗೂ ನಗರಸಭೆಗಳಿಗೆ ಸರ್ಕಾರವು ನೀಡಿರುವ ಅನುದಾನ ಎಷ್ಟು?

(ಇ) ಪುರಸಭೆ ನಗರಸಭೆಗಳು ಆಯಾಯ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ಸಂಪನ್ಮೂಲದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಈ) ಸರ್ಕಾರವು ಪುರಸಭೆಗಳು ತಮ್ಮ ಸ್ವಂತ ಕಾಲಮೇಲೆ ನಿಲ್ಲುವಂತಾಗಲು ಅಕ್ಟ್ರಾಯ್ ಜಾರಿಗೆ ತರುವ ಚಿಂತನೆ ಇದೆಯೇ?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ಪುರಸಭೆಗಳು : 81

ನಗರಸಭೆಗಳು : 40

ಆ) 1997-98ನೇ ಸಾಲಿನಲ್ಲಿ

ಪುರಸಭೆಗಳಿಗೆ : ರೂ. 11,65,51,642

ನಗರಸಭೆಗಳಿಗೆ : ರೂ. 20,37,79,073

ಇ) ಬಂದಿದೆ.

ಈ) ಪರಿಶೀಲಿಸಲಾಗುತ್ತಿದೆ.

ಅಧ್ಯಕ್ಷರು: ಮಂಡಿಸಲಾಯಿತು.

(3) ಪ್ರಕಟಣೆ (1)

ಅಧ್ಯಕ್ಷರು: ಅಂಗವಿಕಲರ ಕ್ಷೇಮಾಭಿವೃದ್ಧಿಗಾಗಿ ಸಮಗ್ರ ನೀತಿಯೊಂದನ್ನು ಸಿದ್ಧಪಡಿಸುವುದಕ್ಕೆ ಅಂಗವಿಕಲರ ಅಧಿನಿಯಮ 1995ನ್ನು ಜಾರಿಗೊಳಿಸಲು ರಾಜ್ಯ

ಸಮನ್ವಯ ಸಮಿತಿಗೆ ಆಯ್ಕೆಯಾಗಬೇಕಾದ ಸದಸ್ಯರ ಸಂಖ್ಯೆಗೆ ಸಮನಾಗಿ ನಾಮಪತ್ರಗಳು ಬಂದಿದ್ದು ಈ ಕೆಳಕಂಡ ಸದಸ್ಯರು ಆಯ್ಕೆಯಾಗಿದ್ದಾರೆಂದು ಈ ಮೂಲಕ ತಿಳಿಸುತ್ತಿದ್ದೇನೆ:

1. ಶ್ರೀಮತಿ ಜ್ಯೋತಿ ರೆಡ್ಡಿ.

2. ಶ್ರೀ ರುದ್ರಗೌಡ ಕುಮ್ಸಿಯಾಳ

ಪ್ರಕಟಣೆ (2)

ರಕ್ತದಾನ

ಅಧ್ಯಕ್ಷರು: ಇವತ್ತು ಬೆಳಗಿನಿಂದ ದೇಶದ ಸ್ವಾತಂತ್ರ್ಯ ಸುವರ್ಣೋತ್ಸವದ ಅಂಗವಾಗಿ ಶಾಸಕಾಂಗ ಕಛೇರಿಯ ಸಿಬ್ಬಂದಿ ಮತ್ತು ಶಾಸಕರು ಎಲ್ಲರೂ ಕೂಡ ರಕ್ತದಾನ ಮಾಡುತ್ತಿದ್ದಾರೆ. ನಾನು ಕೂಡ ಬೆಳಿಗ್ಗೆ ರಕ್ತದಾನ ಮಾಡಿ ಬಂದಿದ್ದೇನೆ. ಮೇಲ್ಮನೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಹೆಚ್.ಕೆ.ಪಾಟೀಲರು ರಕ್ತ ಕೊಟ್ಟು ಬಂದಿದ್ದಾರೆ. ನನಗೆ ತಿಳಿದ ಹಾಗೆ 6-7 ಜನರು ಮಾತ್ರ ಹೋಗಿದ್ದಾರೆ. ಸದೃಢವಾಗಿ ಆರೋಗ್ಯವಾಗಿ ಇರತಕ್ಕವರು 50 ವರ್ಷಗೊಳಗಿರತಕ್ಕ ಎಲ್ಲಾ ಶಾಸಕರು ವಿಶೇಷವಾಗಿ ಮಂತ್ರಿಗಳು ದಯಮಾಡಿ ಈ ಪುಣ್ಯ ಕೆಲಸ ಮಾಡಿ, ರಕ್ತದಾನ ಮಾಡಿ ಬರಬೇಕೆಂದು ವಿನಂತಿಸುತ್ತಿದ್ದೇನೆ.

ಶ್ರೀ ಎನ್.ಯೋಗೀಶ್ ಭಟ್: ಸ್ವಾತಂತ್ರೋತ್ಸವ ಸಂದರ್ಭದಲ್ಲಿ ನಾನು ನಮ್ಮ ಕ್ಷೇತ್ರದಲ್ಲಿ ರಕ್ತದಾನ ಮಾಡಿದ್ದೇನೆ.

ಅಧ್ಯಕ್ಷರು: ನೀವು ಕೊಟ್ಟಿದ್ದೀರಿ, ನಿಮ್ಮ ಬಗ್ಗೆ ನನಗೆ ವಿಶ್ವಾಸ ಇದೆ. ಹೋದ ಸಾರಿಯೂ ನೀವು ಕೊಟ್ಟಿರಿ. ನಾನು ಇಲ್ಲಿ ಹೆಸರು ಹೇಳುವುದುಬೇಡ; ಯಾರು ಯಾರು ರಕ್ತ ಕೊಡಬಲ್ಲರು ಎಂಬುದು ಗೊತ್ತು. ಆಮೇಲೆ ಪಟ್ಟಿ ತರಿಸಿಕೊಂಡು ರಕ್ತ ಕೊಡುವುದಕ್ಕೆ ಅನುಕೂಲ ಇದ್ದೂ ಕೊಡದೆ ಇರುವವರ ಹೆಸರುಗಳನ್ನು ವಿಶೇಷವಾಗಿ ಸದನದಲ್ಲಿ ಓದುತ್ತೇನೆ. ಆದುದರಿಂದ ದಯಮಾಡಿ ಅದಕ್ಕೆಲ್ಲಾ ಅವಕಾಶ ಕೊಡಬೇಡಿ ಮಹಾದೇವ ಪ್ರಸಾದ್ ಅವರೇ ಈಗಲೇ ಹೋಗಿ ರಕ್ತ ಕೊಟ್ಟು ಬನ್ನಿ.

ಶ್ರೀ ಎಸ್.ಸುರೇಶ್ ಕುಮಾರ್: ಹಾಗೆ ಮಾಡುತ್ತೀರೆಂದರೆ ಮಧ್ಯಾಹ್ನ ಕೋರಂ ಇರುವುದಿಲ್ಲ.

ಅಧ್ಯಕ್ಷರು: ಮಾನ್ಯ ಆರೋಗ್ಯ ಸಚಿವರು ಮೊನ್ನೆ ರಾಜಭವನದಲ್ಲಿ ರಕ್ತ ಕೊಟ್ಟಿದ್ದಾರೆ. ಅವರೂ ಕೂಡ ಬೆಳಗ್ಗೆ ನಮ್ಮ ಜೊತೆಯಲ್ಲಿದ್ದರು. ಯಾರು ಯಾರು ಕೊಡಬಹುದು,